

# ದಿಂಬಿನಡಿಯಲ್ಲೊಂದು ಮಿನ್ನಾಗು

■ ಯಂಡಮೂರಿ ವೀರೇಂದ್ರನಾಥ್
ಕನ್ನಡಕ್ಕೆ: ಸಂಡೂರು ವೆಂಕಟೇಶ್
ಕಲೆ: ಮನೋಹರ್ ಆಚಾರ್ಯ

## ಸ್ವರಮಾಧುರ್ಯದ ಮೋಡಿ

'ಅವನ ನಿಜವಾದ ಹೆಸರು ಗೊತ್ತಿಲ್ಲ' ಎಂದನು ಸೆಂಟ್ರಲ್ ಬ್ಯೂರೋದ ಇನ್‌ಚಾರ್ಜ್ ಚೀಫ್. 'ಒಂದೊಂದು ಜಾಗದಲ್ಲಿ ಒಂದೊಂದು ಹೆಸರು...! ಕಾಶ್ಮೀರದಲ್ಲಿ ಮಿಜ್ರಾಡಿನ್, ಕೇರಳದಲ್ಲಿ ನಾಜಿಯಾ, ಆಂಧ್ರದಲ್ಲಿ ಗುಲ್ಜಾರ್...! ಆ ಮೂರನ್ನು ಸೇರಿಸಿ ನಾವು ಅವನಿಗೆ ಇಟ್ಟಿರುವ ಕೋಡ್ ನೇಮ್ 'ಮಿನ್ನಾಗು' (ಮಿಡಿನಾಗರ)...! ಇವನನ್ನು ನಮ್ಮ ದೇಶದ ಒಸಾಮಾ ಬಿನ್ ಲಾಡೆನ್ ಅನ್ನಬಹುದು. ನಮ್ಮ ದೇಶದಲ್ಲಿ ನಡೆಯುವ ಪ್ರತಿ ಟೆರರಿಸ್ಟ್ ವಿಧ್ವಂಸಕ ಕೃತ್ಯದ ಹಿಂದೆ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಇವನ ಹಸ್ತ ಇರುತ್ತದೆ. ಹದಿನೈದು ವರ್ಷಗಳ ಹಿಂದೆ ಮುಂಬೈಯಲ್ಲಾದ ಬ್ಲಾಸ್ಟ್‌ನಲ್ಲಿ ಮುನ್ನೂರು ಮಂದಿ ಅಮಾಯಕರು ಸತ್ತ ಘಟನೆ ನಿಮಗೆ ನೆನಪಿರಬಹುದು. ಆ ಘೋರ ಕೃತ್ಯದಲ್ಲಿ ದಾವೂದ್ ಇಬ್ರಾಹಿಂನ ಜೊತೆ ಇದ್ದವನು ಇವನೇ. ಈ 'ಮಿನ್ನಾಗು' ಎಷ್ಟು ಬುದ್ಧಿವಂತನೆಂದರೆ, ತನ್ನ ಮತದವರ ಮೇಲೆ ಎದುರು ದಾಳಿ ನಡೆಯದೇ ಇರುವ ಹಾಗೆ ಯಾವುದಾದರೂ ಮಸೀದಿಯಲ್ಲಿ ಕೂಡ ಒಂದು 'ನಷ್ಟವಾಗಿರದ ಕೃತ್ರಿಮ' ವಿಧ್ವಂಸ ಸೃಷ್ಟಿಸುತ್ತಾನೆ, ಅಷ್ಟು ಚಾಲಾಕಿ! ಈ ಮಿಜ್ರಾಡಿನ್ ಹೇಗಿದ್ದಾನೋ, ಎಲ್ಲಿರುತ್ತಾನೋ ಯಾರಿಗೂ ತಿಳಿದಿಲ್ಲ. ಒಂದು ದಿನ ಕಾಶ್ಮೀರ್‌ನಲ್ಲಿದ್ದರೆ, ಮತ್ತೊಂದು ದಿನ ಕನ್ಯಾಕುಮಾರಿಯಲ್ಲಿ ಇರುತ್ತಾನೆ. ಇವನ ಒಂದೇ ಒಂದು ಫೋಟೋ ನಮ್ಮಲ್ಲಿಲ್ಲ'

'ಅವನ ಫೋನ್ ಟ್ರಾಫ್ ಮಾಡಿ ಲೊಕೇಷನ್ ಟ್ರೇಸ್ ಮಾಡಬಹುದಲ್ಲ?' ಎಂದು ಕೇಳಿದನು ಕಮಾಂಡೋ ಕೃಷ್ಣ. ಅವನು ಆಜಾನುಬಾಹು, ಅರವಿಂದ ದಳಾಕ್ಷನಲ್ಲದಿದ್ದರೂ ಸ್ಫುರದ್ರೂಪಿಯೇ. ತೀರಾ ಬುದ್ಧಿವಂತನಲ್ಲದ್ದರೂ ದೇಶವೆಂದರೆ ಅಪರಿಮಿತವಾದ ಪ್ರೀತಿ ಇರುವವನು.

'ಇಲ್ಲ, ಸುಮಾರು ನೂರು ಫೋನ್ ಮೇನ್‌ಟೇನ್ ಮಾಡುತ್ತಾನೆ. ಅವನ್ನು ಹದಿನೈದು ದಿನಗಳಿಗೊಮ್ಮೆ ಬದಲಾಯಿಸುತ್ತಾ ಇರುತ್ತಾನೆ' ಎಂದನು ಸಿ.ಬಿ.ಐ. ಚೀಫ್. '... ಆದರೆ ಈ ಕೇಸ್‌ನಲ್ಲಿ ನಾವು ಸ್ವಲ್ಪ ಅಭಿವೃದ್ಧಿ ಸಾಧಿಸಿದ್ದೇವೆ. ಅದಕ್ಕೆ ಕಾರಣ ಇದೇ ಊರಿನಲ್ಲಿರುವ ಒಂದು ಬೇಕರಿಯ ಮಾಲೀಕ 'ಖಾನ್'. ಈತ ಒಬ್ಬ ಪೊಲೀಸ್ ಇನ್‌ಫಾರ್ಮರ್. ನಮ್ಮ ರಾಜ್ಯದಲ್ಲಿ ಎಷ್ಟೋ ಮಂದಿ ಟೆರರಿಸ್ಟ್‌ಗಳು ಆಗಿರುವುದಕ್ಕೆ ಕಾರಣ ಅವನೇ. ಅವನ ಸಹಾಯ ತೆಗೆದುಕೊಳ್ಳಿ. ಅವನ ಜೊತೆ ಮಾತನಾಡುವಾಗ ನಮ್ಮ ಕೋಡ್ ವರ್ಡ್ 'ಮೇರಾ ಭಾರತ್ ಮಹಾನ್'. ಅವನದು 'ಜಹನ್ನಂ ಆತಂಕವಾದಿ'... ಎನಿ ಡೌಟ್ಸ್'

'ಜಹನ್ನಂ ಆತಂಕವಾದಿ, ಅಂದರೆ?' ಕೇಳಿದನು ಕುಕ್ಕುಟೇಶ್ವರಸ್ವಾಮಿ,